# ‘ಒಗ್ಗರಣೆ’ಯ ಪರಿಮಳಕ್ಕೆ ಮನಸೋತು..



■ ಅಲೇಖ

**40** ದಾಟಿದರೂ ಮದುವೆಯಾಗದೆ ಉಳಿದ ಚಿತ್ರದ ನಾಯಕ, ಗೆಳೆಯನ ಜತೆಗೆ ಹೆಣ್ಣು ನೋಡಲು ಹೋಗುತ್ತಾನೆ. ಎದುರಿಗೆ  ಟೀಪಾಯಿಯಲ್ಲಿ ತಟ್ಟೆ ತುಂಬ ವಡೆ, ಕೋಡುಬಳೆ, ಸಿಹಿ ತಿಂಡಿಗಳು. ಅದರ ಎದುರಿಗೇ ಹೆಣ್ಣು ಮತ್ತು ಆಕೆಯ ಇಡೀ ಕುಟುಂಬ ಗಂಡಿನ ಒಪ್ಪಿಗೆಗಾಗಿ ಕಾಯುತ್ತಾ ಕಾತರದಿಂದ ನಿಂತಿದೆ. ಏನು ಮಾತನಾಡಬೇಕೆಂದು ಗಂಡಿಗೆ ತಿಳಿಯುವುದಿಲ್ಲ. ಆದರೆ ಆತನ ಗೆಳೆಯ ವಾಚಾಳಿ. ‘ಎಲ್ಲ ನೀವೇ ಮಾತಾಡ್ತಿದೀರ.. ಗಂಡೂ ಸ್ವಲ್ಪ ಮಾತ–ನಾಡಲಿ. ಏನಾದ್ರೂ ಮಾತಾಡಿ..’ ಎನ್ನುತ್ತಾರೆ ವಧುವಿನ ಅಪ್ಪ. ಏನು ಮಾತನಾಡುವುದು? ಕಣ್ಣರಳಿಸುತ್ತಾ ‘ಇದನ್ನು ತಿನ್ನಬಹುದೆ?’ ಎಂದು ಎದುರಿನ ತಿಂಡಿಗಳತ್ತ ನೋಡಿ ಕೇಳುತ್ತಾನೆ ಗಂಡು! ‘ಧಾರಾಳ ತಿನ್ನಿ ಸಾರ್..’ ಎನ್ನುತ್ತಾರೆ ಹೆಣ್ಣಿನ  ಅಪ್ಪ.

ಗರಿ ಗರಿಯಾದ ಬಿಸಿ ವಡೆಯನ್ನು ಬಾಯಿಗಿಟ್ಟದ್ದೇ ತಡ, ರುಚಿಗೆ ಮರುಳಾದ ನಾಯಕ ಬಾಯಿ ಚಪ್ಪರಿಸಿ ಕಣ್ಣರಳಿಸುತ್ತಾನೆ. ಅಬ್ಬಾ ರುಚಿಯೇ.. ಎಂದು ಕಣ್ಣು ಮುಚ್ಚಿ ಸವಿಯುತ್ತಾನೆ. ಆತ ಕಣ್ಣು ತೆರೆಯುವುದನ್ನೇ ಹೆಣ್ಣಿನ ಮನೆಯವರು ಕಾತರದಿಂದ ಕಾಯುತ್ತಿದ್ದಾರೆ.  ಆತ ಕಣ್ಣು ತೆರೆದ– ಎದುರಿಗೇ ನಿಂತಿದ್ದಾಳೆ ಕನ್ಯೆ. ‘ಇದು ನೀವು ಮಾಡಿದ್ದಾ..?’ ಎನ್ನುವುದು ಆತನ ಮೊದಲ ಪ್ರಶ್ನೆ.

‘ಇಲ್ಲ, ಅಡುಗೆಯವರು ಇದ್ದಾರೆ..’– ತಡವರಿಸುತ್ತಾಳೆ ಆಕೆ.

‘ಎಲ್ಲಿದ್ದಾರೆ ಅವರು..?’ ಎನ್ನುತ್ತಾ ನಾಯಕ ಅಡುಗೆ ಮನೆಗೇ ನುಗ್ಗುತ್ತಾನೆ! ಅಲ್ಲೊಬ್ಬ ಅಡುಗೆ ಭಟ್ಟ ಎಣ್ಣೆ ಕಾವಲಿಯಲ್ಲಿ ಬಿಸಿ ಬಿಸಿ ವಡೆಗಳನ್ನು ಹಾಕುತ್ತಿದ್ದಾನೆ. ‘ಇಂತಹ ಅದ್ಭುತ ರುಚಿಯನ್ನು ಹತ್ತು ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ ಬಸ್‌ಸ್ಟಾಂಡ್ ಪಕ್ಕ ಬೋಂಡದ ಅಂಗಡಿಯಲ್ಲಿ ಸವಿದಿದ್ದೆ ಮಾರಾಯ್ರೆ’ ಎನ್ನುತ್ತಾನೆ ನಾಯಕ. ಆ ಬೋಂಡದಂಗಡಿಯ ಭಟ್ಟನೇ ಅಂಗಡಿ ನಷ್ಟವಾಗಿ ಊರೂರು ಸುತ್ತಿ ಈಗ ಇಲ್ಲಿ ಅಡುಗೆಯವನಾಗಿದ್ದಾನೆ. ‘ಸರಿ, ನಮ್ಮ ಮನೆಗೆ ಬರುತ್ತೀರಾ..?’ ಎನ್ನುವ ಪ್ರಶ್ನೆಗೆ ಆತ ನಿಂತ ಕಾಲಲ್ಲೇ ‘ನಡೀರಿ’ ಅನ್ನುತ್ತಾನೆ. ಹೆಣ್ಣು ನೋಡಲು ಬಂದ ನಾಯಕ ಎಲ್ಲವನ್ನೂ ಮರೆತು ಅಡುಗೆ ಭಟ್ಟನನ್ನು ತನ್ನ ಕಾರಿನಲ್ಲಿ ಕೂರಿಸಿಕೊಂಡು ಹೊರಟೇ ಹೋಗುತ್ತಾನೆ! ‘ಒಗ್ಗರಣೆ’ ಸಿನಿಮಾದ ಒಂದು ಪರಿಮಳಭರಿತ ದೃಶ್ಯವಿದು.

## ಸಿನಿಮಾ ಎಂದರೆ ನಿಜಕ್ಕೂ ಏನು?

ಪ್ರಕಾಶ್ ರೈ ಅವರನ್ನೇ ಹಾಗೆಂದು ಪ್ರಶ್ನಿಸಿದರೆ ಕಣ್ಣುಗಳನ್ನು ಮಿಂಚಿಸುತ್ತಾ ಹೇಳಿದರು– ‘ನನ್ನ ಪ್ರಕಾರ ಸಿನಿಮಾ ಅಂದರೆ ಅದೊಂದು ಸಂಭ್ರಮ!’

ಪ್ರಕಾಶ್ ರೈಯವರ ನಿರ್ದೇಶನದ ಎರಡನೆ ಕನ್ನಡ ಸಿನಿಮಾ ‘ಒಗ್ಗರಣೆ’ ಇಂತಹ ಸಂಭ್ರಮದೊಂದಿಗೇ ಆರಂಭವಾಗುತ್ತದೆ. ಅದು ಊಟ–ತಿಂಡಿಯ ಸಂಭ್ರಮ. ನಗರಜೀವನದ ಒತ್ತಡದಲ್ಲಿ ಇವತ್ತು ಊಟ ಎನ್ನುವುದು ವಾಚ್ ನೋಡಿ ಮಾಡುವ ಯಾಂತ್ರಿಕ ಕ್ರಿಯೆ ಎನ್ನುವಂತಾಗಿದೆ. ಆದರೆ ಹಳ್ಳಿಗಳಲ್ಲಿ ಇವತ್ತಿಗೂ ಊಟ ಎಂದರೆ ಅದೊಂದು ಸಂಭ್ರಮ. ಜತೆಗೊಬ್ಬ ಅತಿಥಿ ಊಟಕ್ಕೆ ಸಾಥ್ ನೀಡಲಿಲ್ಲವೆಂದಾದಲ್ಲಿ ಹಳ್ಳಿಗರಿಗೆ ತಿಂದ ಅನ್ನ ಅರಗುವುದೇ ಇಲ್ಲ.

**(74ನೇ ಪುಟ ನೋಡಿ)**